



(ಅವತೀರ್ಣ - ಮದೀನಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللَّهِ الرَّحْمَٰنِ الرَّحِيمِ ○

1. [1]ಸತ್ಯವಿಶ್ವಾಸಿಗಳೇ, ನೀವು ನನ್ನ ಮಾರ್ಗದಲ್ಲಿ ಹೋರಾಡುವುದಕ್ಕಾಗಿ ಹಾಗೂ ನನ್ನ ಸಂಪ್ರೀತಿ ಪ್ರಾಪ್ತಿಗಾಗಿ (ಊರು ಬಿಟ್ಟು ನಿಮ್ಮ ಮನೆಗಳಿಂದ) ಹೊರಟಿರುವಿರಾದರೆ, ನನ್ನ ಮತ್ತು ನಿಮ್ಮ ಶತ್ರುಗಳನ್ನು ಮಿತ್ರರಾಗಿ ಮಾಡಿಕೊಳ್ಳಬೇಡಿರಿ. ನೀವು ಅವರೊಂದಿಗೆ ಸ್ನೇಹ ಬೆಳೆಸುತ್ತೀರಿ. ವಸ್ತುತಃ ನಿಮ್ಮ ಬಳಿಗೆ ಬಂದಿರುವ ಸತ್ಯವನ್ನು ಅವರು ತಿರಸ್ಕರಿಸಿ ಬಿಟ್ಟಿರುವರು. ನೀವು ನಿಮ್ಮ ಪ್ರಭುವಾಗಿರುವ ಅಲ್ಲಾಹನ ಮೇಲೆ ವಿಶ್ವಾಸವಿರಿಸಿದ್ದೀರೆಂಬ ತಪ್ಪಿಗಾಗಿ ಮಾತ್ರ ಸಂದೇಶವಾಹಕರನ್ನೂ ನಿಮ್ಮನ್ನೂ ದೇಶಭ್ರಷ್ಟಗೊಳಿಸುವುದೇ ಅವರ ಧೋರಣೆಯಾಗಿದೆ. ನೀವು ಅವರಿಗೆ ಗುಪ್ತವಾಗಿ ಸ್ನೇಹ ಸಂದೇಶವನ್ನು ಕಳುಹಿಸುತ್ತೀರಿ. ವಾಸ್ತವದಲ್ಲಿ ನೀವು ಗುಪ್ತವಾಗಿ ಮಾಡುವ ಮತ್ತು ಬಹಿರಂಗವಾಗಿ ಮಾಡುವ ಸಕಲವನ್ನೂ ನಾನು ಚೆನ್ನಾಗಿ ಬಲ್ಲೆನು. ನಿಮ್ಮ ಪೈಕಿ ಹೀಗೆ ಯಾರೇ ಮಾಡಿದರೂ ಅವನು ಖಂಡಿತ ಸನ್ಮಾರ್ಗದಿಂದ ದೂರ ಸರಿದನು.

يَا أَيُّهَا الَّذِينَ آمَنُوا لَا تَتَّخِذُوا عَدُوِّي وَعَدُوَّكُمْ أَوْلِيَاءَ تُلْقُونَ إِلَيْهِمْ بِالْمَوَدَّةِ وَقَدْ كَفَرُوا بِمَا جَاءَكُمْ مِنَ الْحَقِّ يُخْرِجُونَ الرَّسُولَ وَإِيَّاكُمْ أَنْ تُؤْمِنُوا بِاللَّهِ رَبِّكُمْ إِنْ كُنْتُمْ خَرَجْتُمْ جِهَادًا فِي سَبِيلِي وَابْتِغَاءَ مَرْضَاتِي تُسِرُّونَ إِلَيْهِمْ بِالْمَوَدَّةِ وَأَنَا أَعْلَمُ بِمَا أَخْفَيْتُمْ وَمَا أَعْلَنْتُمْ وَمَنْ يَفْعَلْهُ مِنْكُمْ فَقَدْ ضَلَّ سَوَاءَ السَّبِيلِ ①

2. ಅವರ ಧೋರಣೆ ಏನೆಂದರೆ- ನಿಮ್ಮ ಮೇಲೆ ನಿಯಂತ್ರಣ ದೊರೆತರೆ ಅವರು ನಿಮ್ಮ ವಿರುದ್ಧ ದ್ವೇಷ ಸಾಧಿಸುವರು ಮತ್ತು ಕೈಗಳಿಂದಲೂ ನಾಲಗೆಯಿಂದಲೂ ನಿಮಗೆ ಕಾಟ ಕೊಡುವರು. ಹೇಗಾದರೂ ನೀವು ಸತ್ಯನಿಷೇಧಿಗಳಾಗಿ ಬಿಡಬೇಕೆಂದೇ ಅವರು ಅಪೇಕ್ಷಿಸುತ್ತಾರೆ.

إِنْ يَثْقَفُوكُمْ يَكُونُوا لَكُمْ أَعْدَاءً وَيَبْسُطُوا إِلَيْكُمْ أَيْدِيَهُمْ وَأَلْسِنَتَهُمْ بِالسُّوءِ وَوَدُّوا لَوْ تَكْفُرُونَ ②

3. ಪುನರುತ್ಥಾನ ದಿನ ನಿಮ್ಮ ಬಾಂಧವ್ಯಗಳಾಗಲಿ, ನಿಮ್ಮ ಸಂತತಿ

لَنْ تَنْفَعَكُمْ أَرْحَامُكُمْ وَلَا أَوْلَادُكُمْ

1. ಈ ಸೂಕ್ತಗಳು ಮಕ್ಕಾದ ಬಹುದೇವಾರಾಧಕರಿಗೆ ಹ. ಹಾತಿಬ್ ಬಿನ್ ಅಬೀಬಲ್‌ತಅಃರು(ರ) ಬರೆದ ಪತ್ರ ಬಯಲಾದಾಗ ಅವತೀರ್ಣಗೊಂಡಿತೆಂಬ ಬಗ್ಗೆ ವ್ಯಾಖ್ಯಾನಕಾರರಲ್ಲಿ ಒಮ್ಮತಾಭಿಪ್ರಾಯವಿದೆ. ಅದರಲ್ಲಿ ಅವರು ಪ್ರವಾದಿವರ್ಯರು(ಸ) ಮಕ್ಕಾದ ಮೇಲೆ ದಂಡೆತ್ತಿ ಹೋಗಲಿದ್ದಾರೆಂದು ಶತ್ರುಗಳಿಗೆ ಮೊದಲೇ ಮುನ್ಸೂಚನೆ ನೀಡಿದ್ದರು.

ಗಳಾಗಲಿ ಯಾವ ಕೆಲಸಕ್ಕೂ ಬರಲಾರವು.[2] ಅಂದು ಅಲ್ಲಾಹನು ನಿಮ್ಮ ನಡುವೆ ಅಗಲಿಕೆಯನ್ನುಂಟು ಮಾಡುವನು[3] ಮತ್ತು ಅವನೇ ನಿಮ್ಮ ಕರ್ಮಗಳನ್ನು ನೋಡುವವನಾಗಿರುತ್ತಾನೆ.

يَوْمَ الْقِيَامَةِ ۚ يَفْصِلُ بَيْنَكُمْ ۚ وَاللَّهُ
بِمَا تَعْمَلُونَ بَصِيرٌ ﴿٣﴾

4. ನಿಮಗೆ ಇಬ್‌ರಾಹೀಮ್ ಮತ್ತು ಅವರ ಸಂಗಾತಿಗಳಲ್ಲಿ ಒಂದು ಉತ್ತಮ ಆದರ್ಶವಿದೆ. ಅವರು ತಮ್ಮ ಜನಾಂಗದೊಡನೆ- "ನಾವು ನಿಮ್ಮಿಂದ ಹಾಗೂ ನೀವು ಅಲ್ಲಾಹನನ್ನು ಬಿಟ್ಟು ಪೂಜಿಸುತ್ತಿರುವ ಈ ಆರಾಧ್ಯ ವಸ್ತುಗಳಿಂದ ಸಂಪೂರ್ಣ ಅಸಂತುಷ್ಟರಾಗಿದ್ದೇವೆ. ನಾವು ನಿಮ್ಮನ್ನು ಧಿಕ್ಕರಿಸಿದೆವು.[4] ನೀವು ಏಕೈಕನಾದ ಅಲ್ಲಾಹನ ಮೇಲೆ ವಿಶ್ವಾಸವಿರಿಸುವ ವರೆಗೆ ನಮ್ಮ ನಿಮ್ಮೊಳಗೆ ಶಾಶ್ವತವಾಗಿ ದ್ವೇಷ ಮತ್ತು ವೈರತ್ವ ಉಂಟಾಯಿತು" ಎಂದು ಸ್ಪಷ್ಟವಾಗಿ ಹೇಳಿಬಿಟ್ಟರು. ಆದರೆ ಇಬ್‌ರಾಹೀಮರು ತಮ್ಮ ತಂದೆಯೊಡನೆ, "ನಾನು ಖಂಡಿತ ನಿಮ್ಮ ಕ್ಷಮೆಗಾಗಿ ಪ್ರಾರ್ಥಿಸುವೆನು ಮತ್ತು ಅಲ್ಲಾಹನಿಂದ ನಿಮಗಾಗಿ ಏನಾದರೂ ಪಡಕೊಳ್ಳಲು ನನಗೆ ಸಾಧ್ಯವಿಲ್ಲ"[5] ಎಂದು ಹೇಳಿದುದು (ಇದಕ್ಕೆ ಹೊರತಾಗಿದೆ ಮತ್ತು ಇಬ್‌ರಾಹೀಮ್ ಹಾಗೂ ಅವರ ಸಂಗಾತಿಗಳ ಪ್ರಾರ್ಥನೆ ಇದಾಗಿತ್ತು;) "ನಮ್ಮ ಪ್ರಭೂ, ನಾವು ನಿನ್ನ ಮೇಲೆಯೇ ಭರವಸೆಯನ್ನಿರಿಸಿದೆವು, ನಿನ್ನ ಕಡೆಗೇ ನಾವು ವಾಲಿದೆವು ಮತ್ತು ನಿನ್ನ ಸನ್ನಿಧಿಗೇ ನಮಗೆ ಮರಳಲಿಕ್ಕಿದೆ.

قَدْ كَانَتْ لَكُمْ أُسْوَةٌ حَسَنَةٌ فِي إِبْرَاهِيمَ
وَالَّذِينَ مَعَهُ ۖ إِذْ قَالُوا لِقَوْمِهِمْ
إِنَّا بُرَآءُ مِنكُمْ وَمِمَّا تَعْبُدُونَ مِن
دُونِ اللَّهِ كَفَرْنَا بِكُمْ وَبَدَا بَيْنَنَا وَ
بَيْنَكُمُ الْعَدَاوَةُ وَالْبَغْضَاءُ أَبَدًا حَتَّىٰ
تُؤْمِنُوا بِاللَّهِ وَحْدَهُ إِلَّا قَوْلَ إِبْرَاهِيمَ
لِأَبِيهِ لَأَسْتَغْفِرَنَّ لَكَ وَمَا أَمْلِكُ لَكَ
مِنَ اللَّهِ مِن شَيْءٍ ۖ رَّبَّنَا عَلَيْكَ تَوَكَّلْنَا
وَإِلَيْكَ أَنَبْنَا وَإِلَيْكَ الْمَصِيرُ ﴿٤﴾

5. ನಮ್ಮ ಪ್ರಭೂ, ನಮ್ಮನ್ನು ಸತ್ಯನಿಷೇಧಿಗಳ ಪಾಲಿಗೆ ಪರೀಕ್ಷಾ ಸಾಧನವಾಗಿ ಮಾಡಿ ಬಿಡಬೇಡ[6] ಮತ್ತು ನಮ್ಮ ಪ್ರಭೂ, ನಮ್ಮ

رَبَّنَا لَا تَجْعَلْنَا فِتْنَةً لِّلَّذِينَ كَفَرُوا
وَاغْفِرْ لَنَا رَبَّنَا ۖ إِنَّكَ أَنتَ الْعَزِيزُ

2. ಮಕ್ಕಾದಲ್ಲಿರುವ ತಮ್ಮ ಬಂಧು ಬಳಗದವರು ಯುದ್ಧದ ವೇಳೆ ಸುರಕ್ಷಿತವಾಗಿರಲೆಂದು ಹ. ಹಾತಿಬ್(ರ) ಈ ಕೆಲಸ ಮಾಡಿದ್ದರು. ಆದ್ದರಿಂದ ಯಾವ ಬಂಧು-ಬಳಗದವರಿಗಾಗಿ ನೀವು ಈ ಕೆಲಸ ಮಾಡಿದ್ದೀರೋ ಅವರು ಪರಲೋಕದಲ್ಲಿ ನಿಮ್ಮ ನೆರವಿಗೆ ಬರಲಾರರೆಂದು ಹೇಳಲಾಗುತ್ತಿದೆ.

3. ಅರ್ಥಾತ್- ಲೋಕದ ನೆಂಟಸ್ತಿಕೆ, ಸಂಬಂಧ ಮತ್ತು ಸಂಪರ್ಕಗಳನ್ನು ಅಲ್ಲಿ ಮುರಿಯಲಾಗುವುದು. ಪ್ರತಿಯೊಬ್ಬನೂ ಅಲ್ಲಿ ವೈಯಕ್ತಿಕ ನೆಲೆಯಲ್ಲಿ ಹಾಜರಾಗುವನು ಮತ್ತು ಪ್ರತಿಯೊಬ್ಬನಿಗೂ ತನ್ನ ಲೆಕ್ಕ ಸಮರ್ಪಣೆ ಮಾಡಬೇಕಾಗುವುದು. ಆದ್ದರಿಂದ ಯಾವ ವ್ಯಕ್ತಿಯೂ ಯಾವುದೇ ನೆಂಟಸ್ತಿಕೆ, ಸ್ನೇಹ ಅಥವಾ ಗುಂಪಿಗಾಗಿ ಯಾವುದೇ ನಿಷಿದ್ಧ ಕೆಲಸ ಮಾಡಬಾರದು. ಏಕೆಂದರೆ ಅವನು ಮಾಡಿದ್ದರ ಶಿಕ್ಷೆಯನ್ನು ಅವನು ಸ್ವತಃ ಅನುಭವಿಸಬೇಕಾಗುವುದು. ಅವನ ವೈಯಕ್ತಿಕ ಹೊಣೆಗಾರಿಕೆಯಲ್ಲಿ ಬೇರಾರೂ ಅವನಿಗೆ ಭಾಗೀದಾರರಾಗಲಾರರು.

4. ಅರ್ಥಾತ್- ನಾವು ನಿಮ್ಮನ್ನು ನಿರಾಕರಿಸುವವರಾಗಿದ್ದೇವೆ. ನೀವು ಸತ್ಯದಲ್ಲಿದ್ದೀರೆಂದಾಗಲಿ ನಿಮ್ಮ ಧರ್ಮವನ್ನಾಗಲಿ ನಾವು ಸಮ್ಮತಿಸುವುದಿಲ್ಲ.

5. ಬೇರೆ ಮಾತುಗಳಲ್ಲಿ ಹೇಳುವುದಾದರೆ ಅವರು ತಮ್ಮನ್ನು ನಿರಾಕರಿಸುವ ಬಹುದೇವಾರಾಧಕ ಜನಾಂಗದೊಂದಿಗೆ ಅತ್ಯಂತ ಸ್ಪಷ್ಟವಾಗಿ ಅಸಮಾಧಾನ ಮತ್ತು ಸಂಬಂಧರಾಹಿತ್ಯವನ್ನು ಪ್ರಕಟಿಸಿದರು. ನಿಮ್ಮ ಪಾಲಿಗೆ ಹ. ಇಬ್‌ರಾಹೀಮ್‌ರ(ಅ) ಈ ಧೋರಣೆ ಅನುಕರಣಾರ್ಹವಾಗಿದೆ. ಆದರೆ ಅವರು ತಮ್ಮ ಬಹುದೇವಾರಾಧಕ ತಂದೆಗಾಗಿ ಕ್ಷಮೆಯ ಪ್ರಾರ್ಥನೆ ಮಾಡುವ ವಚನ ಕೊಟ್ಟಿದ್ದಾಗಲಿ ಅಥವಾ ವಸ್ತುಶಃ ಅವರ ಪರವಾಗಿ ಪ್ರಾರ್ಥಿಸಿದ್ದಾಗಲಿ ನಿಮ್ಮ ಪಾಲಿಗೆ ಅನುಕರಣೀಯವಲ್ಲ.

6. ಸತ್ಯನಿಷೇಧಿಗಳಿಗೆ ಸತ್ಯವಿಶ್ವಾಸಿಗಳು ಅನೇಕ ರೂಪದಲ್ಲಿ 'ಫಿತ್ನಾ' ಅಥವಾ ಪರೀಕ್ಷಾಸಾಧನವಾಗಿ ಮಾರ್ಪಡಬಹುದು. ಉದಾಹರಣೆಗೆ ಸತ್ಯನಿಷೇಧಿಗಳು ಅವರ ಮೇಲೆ ಪ್ರಬಲರಾಗಿ ಬಿಡಬಹುದು. ಅದನ್ನು ಅವರು ನಾವು ಸತ್ಯದಲ್ಲಿದ್ದೇವೆ ಮತ್ತು ಸತ್ಯವಿಶ್ವಾಸಿಗಳು

الْحَكِيمُ ⑤

ತಪ್ಪುಗಳನ್ನು ಕ್ಷಮಿಸು, ನಿಸ್ಸಂದೇಹವಾಗಿಯೂ ನೀನೇ ಪ್ರಬಲನೂ ಯುಕ್ತಿಪೂರ್ಣನೂ ಆಗಿರುತ್ತೀ."

لَقَدْ كَانَ لَكُمْ فِيهِمْ أُسْوَةٌ حَسَنَةٌ لِّمَن كَانَ يَرْجُوا اللَّهَ وَالْيَوْمَ الْآخِرَ ۚ وَمَن يَتَوَلَّ فَإِنَّ اللَّهَ هُوَ الْغَنِيُّ الْحَمِيدُ ⑥

6. ನಿಮಗೆ ಮತ್ತು ಅಲ್ಲಾಹನಲ್ಲೂ ಪುನರುತ್ಥಾನ ದಿನದಲ್ಲೂ ನಿರೀಕ್ಷೆ ಇರಿಸಿರುವ ಪ್ರತಿಯೊಬ್ಬನಿಗೆ, ಅವರ ಚರ್ಯೆಯಲ್ಲಿ ಉತ್ತಮ ಆದರ್ಶವಿದೆ. ಯಾರಾದರೂ ಇದರಿಂದ ವಿಮುಖರಾದರೆ, ಅಲ್ಲಾಹನು ನಿರಪೇಕ್ಷನೂ ಸ್ವಯಂ ಪ್ರಶಂಸಾರ್ಹನೂ ಆಗಿರುತ್ತಾನೆ.

عَسَى اللَّهُ أَن يَجْعَلَ بَيْنَكُمْ وَبَيْنَ الَّذِينَ عَادَيْتُم مِّنْهُم مَّوَدَّةً ۚ وَاللَّهُ قَدِيرٌ ۚ وَاللَّهُ غَفُورٌ رَّحِيمٌ ⑦

7. ಇಂದು ನೀವು ಯಾರೊಂದಿಗೆ ವೈರ ಬೆಳೆಸಿಕೊಂಡಿರುವಿರೋ ಅವರ ಮತ್ತು ನಿಮ್ಮ ನಡುವೆ ಅಲ್ಲಾಹನು ಎಂದಾದರೂ ಸ್ನೇಹವನ್ನು ಉಂಟುಮಾಡಿ ಬಿಡಲೂಬಹುದು.[7] ಅಲ್ಲಾಹನು ಬಹಳ ಸಮರ್ಥನಾಗಿದ್ದಾನೆ ಮತ್ತು ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.

لَا يَنْهَاكُمُ اللَّهُ عَنِ الَّذِينَ لَمْ يُقَاتِلُوكُمْ فِي الدِّينِ وَلَمْ يُخْرِجُوكُم مِّن دِيَارِكُمْ أَن تَبَرُّوهُمْ وَتُقْسِطُوا إِلَيْهِمْ ۚ إِنَّ اللَّهَ يُحِبُّ الْمُقْسِطِينَ ⑧

8. ಧರ್ಮದ ವಿಷಯದಲ್ಲಿ ನಿಮ್ಮೊಡನೆ ಯುದ್ಧ ಮಾಡಿರದ ಹಾಗೂ ನಿಮ್ಮನ್ನು ನಿಮ್ಮ ಮನೆಗಳಿಂದ ಹೊರ ಹಾಕಿರದವರೊಂದಿಗೆ ಸೌಜನ್ಯ ಹಾಗೂ ನ್ಯಾಯದೊಂದಿಗೆ ವರ್ತಿಸುವುದರಿಂದ ಅಲ್ಲಾಹನು ನಿಮ್ಮನ್ನು ತಡೆಯುವುದಿಲ್ಲ. ಅಲ್ಲಾಹನು ನ್ಯಾಯ ಪಾಲನೆ ಮಾಡುವವರನ್ನು ಪ್ರೀತಿಸುತ್ತಾನೆ.[8]

إِنَّمَا يَنْهَاكُمُ اللَّهُ عَنِ الَّذِينَ قَاتَلُوكُمْ فِي الدِّينِ

9. ನೀವು ಧರ್ಮದ ವಿಷಯದಲ್ಲಿ ನಿಮ್ಮ ವಿರುದ್ಧ ಯುದ್ಧ

ಸಂಪೂರ್ಣವಾಗಿ ಮಿಥ್ಯದಲ್ಲಿದ್ದಾರೆಂಬುದಕ್ಕೆ ಆಧಾರವೆಂದು ಪರಿಗಣಿಸಬಹುದು. ಸತ್ಯವಿಶ್ವಾಸಿಗಳ ಮೇಲೆ ಸತ್ಯನಿಷೇಧಿಗಳ ಶೋಷಣೆ ಮತ್ತು ದಬ್ಬಾಳಿಕೆ ಎಲ್ಲೆ ಮೀರಬಹುದು. ಕೊನೆಗೆ ಅವರು ಅವರಿಂದ ಒತ್ತಡಕ್ಕೊಳಗಾಗಿ ತಮ್ಮ ಧರ್ಮ ಮತ್ತು ಚಾರಿತ್ರ್ಯವನ್ನು ಮಾರಿಕೊಳ್ಳಬಹುದು. ಅಥವಾ ಸತ್ಯಧರ್ಮದ ಪ್ರಾತಿನಿಧ್ಯದ ಉನ್ನತ ಪದವಿಗೆ ತಲಪಿದ ನಂತರವೂ ಆ ಸ್ಥಾನಕ್ಕೆ ಅನುಯೋಜ್ಯವಾದ ನೈತಿಕ ವೈಶಿಷ್ಟ್ಯಗಳಿಂದ ಮುಕ್ತವಾಗಿರಬಹುದು. ಅಜ್ಞಾನಪೀಡಿತ ಸಮಾಜದಲ್ಲಿ ಸಾಮಾನ್ಯವಾಗಿ ಹರಡಿರುವಂತಹ ದೋಷಗಳನ್ನೇ ಲೋಕ ಅವರಲ್ಲೂ ಕಾಣಬಹುದು. ಆಗ ನಮ್ಮ ಸತ್ಯನಿಷೇಧಕ್ಕಿಂತ ಮಿಗಿಲಾದ ಅದಾವ ವಿಶೇಷತೆ ಈ ಧರ್ಮಕ್ಕಿದೆ ಎಂದು ಕೇಳುವ ಅವಕಾಶ ಸತ್ಯನಿಷೇಧಿಗಳಿಗೆ ದೊರೆಯಬಹುದು.

7. ಮೇಲಿನ ಸೂಕ್ತದಲ್ಲಿ ಮುಸ್ಲಿಮರಿಗೆ ಸತ್ಯನಿಷೇಧದಲ್ಲಿರುವ ತಮ್ಮ ಸಂಬಂಧಿಕರೊಂದಿಗೆ ಸಂಪರ್ಕ ಕಡಿದುಕೊಳ್ಳಲು ಹೇಳಿದ ನಂತರ, ನಿಮ್ಮ ಈ ಸಂಬಂಧಿಕರೇ ಮುಸ್ಲಿಮರಾಗಿ ಬಿಡಬಹುದು ಮತ್ತು ಇಂದಿರುವ ವೈಷಮ್ಯ ನಾಳೆ ಮತ್ತೆ ಪ್ರೀತಿಯಲ್ಲಿ ಪರಿವರ್ತನೆಗೊಳ್ಳಬಹುದೆಂಬ ವಿಶ್ವಾಸವನ್ನು ಮೂಡಿಸಲಾಗುತ್ತಿದೆ.

8. ಅರ್ಥಾತ್- ನಿಮ್ಮೊಂದಿಗೆ ಯಾರು ದ್ವೇಷವನ್ನು ಹೊಂದಿಲ್ಲವೋ ಅವರ ಬಗ್ಗೆ ನೀವೂ ದ್ವೇಷದಿಂದ ವರ್ತಿಸದಿರುವುದು ನ್ಯಾಯದ ಬೇಡಿಕೆಯಾಗಿದೆ. ಶತ್ರುಗಳನ್ನು ಮತ್ತು ಶತ್ರುಗಳಲ್ಲದವರನ್ನು ಒಂದೇ ಸ್ಥಾನದಲ್ಲಿರಿಸುವುದು ಮತ್ತು ಇಬ್ಬರೊಂದಿಗೂ ಒಂದೇ ರೀತಿಯ ಧೋರಣೆ ತಳೆಯುವುದು ನ್ಯಾಯವಲ್ಲ. ವಿಶ್ವಾಸವಿರಿಸಿದ್ದಕ್ಕಾಗಿ ನಿಮ್ಮ ಮೇಲೆ ಅಕ್ರಮವೆಸಗಿದ, ನಿಮ್ಮನ್ನು ದೇಶಬಿಟ್ಟು ಹೊರಡಲು ನಿರ್ಬಂಧಿಸಿದ ಮತ್ತು ಅನಂತರವೂ ನಿಮ್ಮ ಬೆಂಬಿಡದಂತಹ ವ್ಯಕ್ತಿಗಳೊಂದಿಗೆ ಕಠೋರವಾಗಿ ವರ್ತಿಸಲು ನಿಮಗೆ ಹಕ್ಕಿದೆ. ಆದರೆ ಅಕ್ರಮಗಳಲ್ಲಿ ಯಾವುದೇ ರೀತಿ ಪಾಲ್ಗೊಳ್ಳದಂತಹ ವ್ಯಕ್ತಿಗಳೊಂದಿಗೆ ಉತ್ತಮ ವರ್ತನೆ ಕೈಗೊಳ್ಳುವುದು ಮತ್ತು ನೆಂಟಸ್ಥಿಕೆಯ ಸಂಬಂಧದ ಆಧಾರದಲ್ಲಿ ಅವರೊಂದಿಗೆ ನಿಮಗಿರುವ ಹಕ್ಕುಗಳನ್ನು ತೀರಿಸುವಲ್ಲಿ ಯಾವುದೇ ಚ್ಯುತಿ ಮಾಡದಿರುವುದು ನ್ಯಾಯದ ಬೇಡಿಕೆಯಾಗಿದೆ.

وَاَخْرَجُوْكُمْ مِّنْ دِيَارِكُمْ وَظٰهَرُوْا عَلٰٓى اِخْرَاجِكُمْ اَنْ تَوَلَّوْهُمْ ۚ وَمَنْ يَّتَوَلَّهُمْ فَاُولٰٓئِكَ هُمُ الظّٰلِمُوْنَ ⑨

ಮಾಡಿರುವ ಹಾಗೂ ನಿಮ್ಮನ್ನು ನಿಮ್ಮ ಮನೆಗಳಿಂದ ಹೊರ ಹಾಕಿರುವ ಮತ್ತು ನಿಮ್ಮನ್ನು ಹೊರ ಹಾಕುವ ವಿಷಯದಲ್ಲಿ ಪರಸ್ಪರ ಸಹಕರಿಸಿರುವ ಜನರೊಂದಿಗೆ ಸ್ನೇಹ ಬೆಳೆಸುವುದರಿಂದ ಮಾತ್ರ ಅಲ್ಲಾಹನು ನಿಮ್ಮನ್ನು ತಡೆಯುತ್ತಾನೆ. ಅವರೊಂದಿಗೆ ಸ್ನೇಹ ಬೆಳೆಸುವವರೇ ಅಕ್ರಮಿಗಳು.

يٰٓاَيُّهَا الَّذِيْنَ اٰمَنُوْٓا اِذَا جَآءَكُمُ الْمُؤْمِنٰتُ مُهٰجِرٰتٍ فَامْتَحِنُوْهُنَّ ۭ اَللّٰهُ اَعْلَمُ بِاِيْمَانِهِنَّ ۚ فَاِنْ عَلِمْتُمُوْهُنَّ مُؤْمِنٰتٍ فَلَا تَرْجِعُوْهُنَّ اِلَى الْكُفَّارِ ۭ لَا هُنَّ حِلٌّ لَّهُمْ وَلَا هُمْ يَحِلُّوْنَ لَهُنَّ ۭ وَاٰتُوْهُمْ مَّآ اَنْفَقُوْا ۭ وَلَا جُنَاحَ عَلَيْكُمْ اَنْ تَنْكِحُوْهُنَّ اِذَآ اٰتَيْتُمُوْهُنَّ اُجُوْرَهُنَّ ۭ وَلَا تُمْسِكُوْا بِعِصَمِ الْكَوَافِرِ وَسْـَٔلُوْا مَآ اَنْفَقْتُمْ وَلْيَسْـَٔلُوْا مَآ اَنْفَقُوْا ۭ ذٰلِكُمْ حُكْمُ اللّٰهِ ۭ يَحْكُمُ بَيْنَكُمْ ۭ وَاللّٰهُ عَلِيْمٌ حَكِيْمٌ ⑩

10. ಸತ್ಯವಿಶ್ವಾಸಿಗಳೇ, ಸತ್ಯವಿಶ್ವಾಸಿನಿಯರು ವಲಸೆ ಮಾಡಿ ನಿಮ್ಮ ಬಳಿಗೆ ಬಂದರೆ, (ಅವರು ಸತ್ಯವಿಶ್ವಾಸಿನಿಯರೆಂಬ ಕುರಿತು) ಪರೀಕ್ಷಿಸಿಕೊಳ್ಳಿರಿ. ಅವರ ಸತ್ಯವಿಶ್ವಾಸದ ನಿಜಸ್ಥಿತಿಯನ್ನು ಅಲ್ಲಾಹನೇ ಚೆನ್ನಾಗಿ ಬಲ್ಲನು. ಅವರು ಸತ್ಯವಿಶ್ವಾಸಿನಿಯರೆಂದು ನಿಮಗೆ ತಿಳಿದು ಬಂದಾಗ, ಅವರನ್ನು ಸತ್ಯನಿಷೇಧಿಗಳ ಕಡೆಗೆ ಮರಳಿಸಬೇಡಿರಿ.[9] ಅವರು ಸತ್ಯನಿಷೇಧಿಗಳ ಪಾಲಿಗೆ ಧರ್ಮಬದ್ಧರಲ್ಲ ಮತ್ತು ಸತ್ಯನಿಷೇಧಿಗಳು ಅವರ ಪಾಲಿಗೂ ಧರ್ಮಬದ್ಧರಲ್ಲ. ಅವರ ಸತ್ಯನಿಷೇಧಿ ಗಂಡಂದಿರು ಅವರಿಗೆ ಕೊಟ್ಟಿದ್ದ 'ವಿವಾಹಧನ'ವನ್ನು ಅವರಿಗೆ ಮರಳಿಸಿರಿ. ನೀವು ಅವರ 'ವಿವಾಹಧನ'ವನ್ನು ಪಾವತಿ ಮಾಡಿದ ಮೇಲೆ ನೀವು ಅವರೊಂದಿಗೆ ನಿಕಾಹ್ ಮಾಡಿಕೊಳ್ಳುವುದರಲ್ಲೇನೂ ದೋಷವಿಲ್ಲ[10] ಮತ್ತು ನೀವು ಕೂಡಾ ಸತ್ಯನಿಷೇಧಿ ಸ್ತ್ರೀಯರನ್ನು ನಿಮ್ಮ ವಿವಾಹ ಬಂಧನದಲ್ಲಿ ತಡೆದಿರಿಸಿಕೊಳ್ಳಬೇಡಿರಿ. ನೀವು ನಿಮ್ಮ ಸತ್ಯನಿಷೇಧಿ ಪತ್ನಿಯರಿಗೆ ಕೊಟ್ಟಿದ್ದ ವಿವಾಹಧನವನ್ನು ಮರಳಿ ಪಡೆದುಕೊಳ್ಳಿರಿ ಮತ್ತು ಸತ್ಯನಿಷೇಧಿಗಳು ತಮ್ಮ ಮುಸ್ಲಿಮ್ ಪತ್ನಿಯರಿಗೆ ಕೊಟ್ಟಿದ್ದ 'ವಿವಾಹಧನ'ವನ್ನು ಮರಳಿ ಪಡೆದುಕೊಳ್ಳಲಿ. ಇದು ಅಲ್ಲಾಹನ ಆದೇಶವಾಗಿದೆ. ಅವನು ನಿಮ್ಮ ನಡುವೆ ತೀರ್ಮಾನ ಮಾಡುತ್ತಾನೆ. ಅವನು ಸರ್ವಜ್ಞನೂ ಯುಕ್ತಿಪೂರ್ಣನೂ ಆಗಿರುತ್ತಾನೆ.

9. ಹುದೈಬಿಯಾ ಸಂಧಿಯ ಬಳಿಕ ಮೊದಮೊದಲು ಮುಸ್ಲಿಮ್ ಪುರುಷರು ಮಕ್ಕಾದಿಂದ ಓಡೋಡಿ ಮದೀನಾಕ್ಕೆ ಬರುತ್ತಿದ್ದರು ಮತ್ತು ಒಪ್ಪಂದದ ಶರತ್ತುಗನುಗುಣವಾಗಿ ಅವರನ್ನು ಮರಳಿಸಲಾಗುತ್ತಿತ್ತು. ಅನಂತರ ಮುಸ್ಲಿಮ್ ಸ್ತ್ರೀಯರೂ ಬರಲಾರಂಭಿಸಿದರು. ಆಗ ಸತ್ಯನಿಷೇಧಿಗಳು ಒಪ್ಪಂದದ ಆಧಾರದಲ್ಲಿ ಅವರನ್ನೂ ಮರಳಿಸಬೇಕೆಂಬ ಬೇಡಿಕೆಯನ್ನು ಮುಂದಿಟ್ಟರು. ಹುದೈಬಿಯಾ ಸಂಧಿಯ ಶರತ್ತುಗಳು ಮಹಿಳೆಯರಿಗೂ ಅನ್ವಯಿಸುತ್ತದೆಯೇ ಎಂಬ ಪ್ರಶ್ನೆ ಆಗ ಉದ್ಭವಿಸಿತು. ಪ್ರಸ್ತುತ ಪ್ರಶ್ನೆಗೆ ಅಲ್ಲಾಹನು ಈ ಸೂಕ್ತದಲ್ಲಿ ಉತ್ತರ ನೀಡಿದ್ದಾನೆ. ಅವರು ಮುಸ್ಲಿಮರಾಗಿದ್ದು, ಸತ್ಯವಿಶ್ವಾಸಕ್ಕಾಗಿಯೇ ಅವರು ವಲಸೆ ಕೈಗೊಂಡಿದ್ದಾರೆ. ಬೇರಾವುದೇ ವಸ್ತು ಅವರನ್ನು ಎಳೆತಂದಿಲ್ಲವೆಂದು ನಿಮಗೆ ಖಾತ್ರಿಯಾದರೆ ಅವರನ್ನು ಮರಳಿಸಬೇಕಾಗಿಲ್ಲ ಎಂದು ಹೇಳಲಾಗಿದೆ. ಒಪ್ಪಂದದ ಶರತ್ತುಗಳಲ್ಲಿ 'ರಜುಲುನ್'(ಪುರುಷರು) ಎಂಬ ಪದ ಪ್ರಯೋಗವಾಗಿತ್ತು. ಇದರ ಆಧಾರದಲ್ಲೇ ಈ ಆಜ್ಞೆ ನೀಡಲಾಗಿದೆ ಎಂದು ಬುಖಾರಿಯವರ ಉಲ್ಲೇಖದಿಂದ ವ್ಯಕ್ತವಾಗುತ್ತದೆ.

10. ಅರ್ಥಾತ್- ಅವರ ಸತ್ಯನಿಷೇಧಿ ಪತಿಯಂದಿರಿಗೆ ಮರಳಿಸಲಾಗುವ 'ಮಹರ್' (ವಧುದಕ್ಷಿಣೆ) ಸ್ವತಃ ಆ ಸ್ತ್ರೀಯರ 'ಮಹರ್' ಎನಿಸಿಕೊಳ್ಳಲಾರದು. ಸದ್ಯ ಯಾವ ಮುಸ್ಲಿಮನಾದರೂ ಆ ಪೈಕಿ ಯಾವುದೇ ಸ್ತ್ರೀಯೊಂದಿಗೆ ನಿಕಾಹ್ ಮಾಡಿಕೊಳ್ಳಬಯಸಿದರೆ ಅವರ 'ಮಹರ್' ಪಾವತಿಸಿ ಅವರನ್ನು ವಿವಾಹ ಮಾಡಿಕೊಳ್ಳಬಹುದು.

11. ಇನ್ನು ನಿಮ್ಮ ಸತ್ಯನಿಷೇಧಿ ಪತ್ನಿಯರ ವಿವಾಹ ಧನದಿಂದ ಏನಾದರೂ ಸತ್ಯನಿಷೇಧಿಗಳಿಂದ ನಿಮಗೆ ಮರಳಿ ಸಿಗದಿದ್ದರೆ, ಅನಂತರ ನಿಮ್ಮ ಸರದಿ ಬಂದಾಗ ಯಾರ ಪತ್ನಿಯರು ಅತ್ತ ಉಳಿದು ಬಿಟ್ಟಿರುವರೋ ಅವರಿಗೆ ಅವರು ಕೊಟ್ಟಿರುವ ವಿವಾಹ ಧನಕ್ಕೆ ಸಮನಾದಷ್ಟು ಮೊತ್ತವನ್ನು ಕೊಟ್ಟುಬಿಡಿರಿ ಮತ್ತು ನೀವು ವಿಶ್ವಾಸ ವಿರಿಸಿರುವ ಅಲ್ಲಾಹನನ್ನು ಭಯ ಪಡುತ್ತಲಿರಿ.

وَاِنْ فَاتَكُمْ شَىْءٌ مِّنْ اَزْوَاجِكُمْ اِلَى
الْكُفَّارِ فَعَاقَبْتُمْ فَاٰتُوا الَّذِيْنَ ذَهَبَتْ
اَزْوَاجُهُمْ مِّثْلَ مَآ اَنْفَقُوْا ؕ وَ اتَّقُوا
اللّٰهَ الَّذِىْٓ اَنْتُمْ بِهٖ مُؤْمِنُوْنَ ⑪

12. ಸಂದೇಶವಾಹಕರೇ, ಸತ್ಯವಿಶ್ವಾಸಿನಿಯರು, ನಿಷ್ಠೆಯ ಕರಾರು ಮಾಡಲು ನಿಮ್ಮ ಬಳಿಗೆ ಬಂದು[11] ತಾವು ಅಲ್ಲಾಹನೊಂದಿಗೆ ಯಾರನ್ನೂ ಸಹಭಾಗಿಗಳಾಗಿ ಮಾಡಲಾರೆವು, ಕಳವು ಮಾಡಲಾರೆವು, ವ್ಯಭಿಚಾರವೆಸಗಲಾರೆವು, ತಮ್ಮ ಮಕ್ಕಳನ್ನು ವಧಿಸಲಾರೆವು, ತಮ್ಮ ಕೈಕಾಲುಗಳ ಮುಂದೆ ಯಾವುದೇ ಸುಳ್ಳಾರೋಪವನ್ನು ಸೃಷ್ಟಿಸಿ ತರಲಾರೆವು[12] ಮತ್ತು ಯಾವುದೇ ಸತ್ಕಾರ್ಯದ ವಿಷಯದಲ್ಲಿ ನಿಮ್ಮ ಆಜ್ಞೋಲ್ಲಂಘನೆ ಮಾಡಲಾರೆವು[13] ಎಂದು ಪ್ರತಿಜ್ಞೆ ಮಾಡಿದಾಗ, ಅವರಿಂದ ಕರಾರನ್ನು ಸ್ವೀಕರಿಸಿಕೊಳ್ಳಿರಿ ಮತ್ತು ಅವರಿಗಾಗಿ ಅಲ್ಲಾಹನೊಡನೆ ಕ್ಷಮಾಯಾಚನೆ ಮಾಡಿರಿ.

يٰٓاَيُّهَا النَّبِىُّ اِذَا جَآءَكَ الْمُؤْمِنٰتُ
يُبَايِعْنَكَ عَلٰٓى اَنْ لَّا يُشْرِكْنَ بِاللّٰهِ
شَيْـًٔا وَّلَا يَسْرِقْنَ وَلَا يَزْنِيْنَ
وَلَا يَقْتُلْنَ اَوْلَادَهُنَّ وَلَا يَاْتِيْنَ
بِبُهْتَانٍ يَّفْتَرِيْنَهٗ بَيْنَ اَيْدِيْهِنَّ
وَاَرْجُلِهِنَّ وَلَا يَعْصِيْنَكَ فِىْ
مَعْرُوْفٍ فَبَايِعْهُنَّ وَاسْتَغْفِرْ لَهُنَّ

11. ಈ ಸೂಕ್ತಗಳು ಮಕ್ಕಾ ವಿಜಯಕ್ಕೆ ಸ್ವಲ್ಪ ಮೊದಲು ಅವತೀರ್ಣಗೊಂಡಿತ್ತು. ಅನಂತರ ಮಕ್ಕಾ ವಿಜಯವಾದಾಗ ಕುರೈಶರು ತಂಡೋಪತಂಡವಾಗಿ ಪ್ರವಾದಿವರ್ಯರೊಂದಿಗೆ(ಸ) 'ಬೈಅತ್' ಮಾಡಲು ಹಾಜರಾಗತೊಡಗಿದರು. ಪುರುಷರಿಂದ ಅವರು 'ಸಫಾ' ಬೆಟ್ಟದಲ್ಲಿ ಸ್ವತಃ ಬೈಅತ್ ಪಡೆದರು. ಮಹಿಳೆಯರಿಂದ ಬೈಅತ್ ಮತ್ತು ಈ ಸೂಕ್ತದಲ್ಲಿ ಉಲ್ಲೇಖಿಸಲಾಗಿರುವ ವಿಷಯಗಳ ಬಗ್ಗೆ ಕರಾರು ಪಡೆಯಲು ಅವರು ಹ. ಉಮರ್‌ರನ್ನು(ರ) ತಮ್ಮ ಪರವಾಗಿ ನೇಮಿಸಿದರು. ತರುವಾಯ ಮದೀನಾಕ್ಕೆ ಮರಳಿದ ನಂತರ ಅವರು ಮನೆಯೊಂದರಲ್ಲಿ ಅನ್ಸಾರ್‌ಗಳ ಪೈಕಿಯ ಮಹಿಳೆಯರಿಗೆ ಒಟ್ಟು ಸೇರುವಂತೆ ಆದೇಶಿಸಿ ಹ. ಉಮರ್‌ರನ್ನು(ರ) ಅವರೊಂದಿಗೆ 'ಬೈಅತ್' ಪಡೆಯಲು ಕಳುಹಿಸಿದರು.

12. ಅರ್ಥಾತ್- ಎರಡು ವಿಧದ ಆರೋಪಗಳು. ಮೊದಲನೆಯದಾಗಿ ಮಹಿಳೆಯೊಬ್ಬಳು ಇತರ ಮಹಿಳೆಯರ ಬಗ್ಗೆ ಪುರುಷರೊಂದಿಗೆ ಸರಸ ಸಂಬಂಧ ಹೊಂದಿರುವ ಬಗ್ಗೆ ಆರೋಪಿಸುವುದು ಮತ್ತು ಆ ಬಗ್ಗೆ ಅಲ್ಲಸಲ್ಲದ ಕಥೆ ಹೆಣೆಯುವುದು. ಎರಡನೆಯದಾಗಿ ಮಹಿಳೆಯೊಬ್ಬಳು ಇತರರಿಂದ ಹುಟ್ಟಿದ ಮಗುವನ್ನು ಹೆತ್ತು, ಇದು ನಿನ್ನ ಮಗುವೇ ಆಗಿದೆ ಎಂದು ಪತಿಯಲ್ಲಿ ವಿಶ್ವಾಸ ಮೂಡಿಸುವುದು.

13. ಈ ಸಂಕ್ಷಿಪ್ತ ವಾಕ್ಯದಲ್ಲಿ ಎರಡು ಪ್ರಮುಖ ಕಾನೂನಿನ ಅಂಶವನ್ನು ವಿವರಿಸಲಾಗಿದೆ. ಮೊದಲನೆಯದಾಗಿ ಪ್ರವಾದಿವರ್ಯರ(ಸ) ಅನುಸರಣೆಗೂ ಒಳಿತಿನಲ್ಲಿ ಅನುಸರಿಸುವ ಶರತ್ತು ವಿಧಿಸಲಾಗಿದೆ. ನಿಜವಾಗಿ ಪ್ರವಾದಿವರ್ಯರು(ಸ) ಎಂದಾದರೂ ಕೆಡುಕನ್ನು ಆದೇಶಿಸಿಯಾರೆಂದು ಕಿಂಚಿತ್ ಸಂಶಯ ಪಡಲಿಕ್ಕೂ ಆಸ್ಪದವಿರಲಿಲ್ಲ. ಅದರ ಹೊರತಾಗಿಯೂ ಇಂತಹ ಆದೇಶ ಕೊಡಲಾಗಿದೆ. ಇದರಿಂದ ಲೋಕದಲ್ಲಿ ದೇವನ ನಿಯಮಗಳನ್ನು ಮೀರಿ ಯಾವುದೇ ಸೃಷ್ಟಿಯನ್ನು ಅನುಸರಿಸಲಾಗುವುದಿಲ್ಲ ಎಂಬ ವಿಚಾರ ಸ್ಪಷ್ಟವಾಗುತ್ತದೆ. ಏಕೆಂದರೆ ಸ್ವತಃ ಪ್ರವಾದಿವರ್ಯರ(ಸ) ಅನುಸರಣೆಗೆ ಒಳಿತಿನಲ್ಲಿ ಅವರನ್ನು ಅನುಸರಿಸುವ ಶರತ್ತು ಒಡ್ಡಲಾಗಿದೆ. ಹಾಗಿರುವಾಗ ಇನ್ನಿತರರಿಗೆ ನಿಶ್ಶರ್ಥ ಅನುಸರಣೆ ಅಥವಾ ದೇವನಿಯಮಕ್ಕೆ ವಿರುದ್ಧವಾದ ಯಾವುದೇ ವಿಧಿ ನಿಯಮ ಇಲ್ಲವೇ ಸಂಪ್ರದಾಯದ ಪಾಲನೆಯ ಹಕ್ಕು ಅನ್ವಯವಾಗುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಎರಡನೆಯದಾಗಿ ಇಲ್ಲಿ ಸಾಂವಿಧಾನಿಕವಾಗಿ ಬಹಳ ಮಹತ್ವ ಹೊಂದಿರುವ ವಿಷಯವನ್ನು ವಿವರಿಸಲಾಗಿದೆ. ಅದೇನೆಂದರೆ ಈ ಸೂಕ್ತದಲ್ಲಿ ಐದು ನಕಾರಾತ್ಮಕ ಆದೇಶಗಳನ್ನು ನೀಡಿದ ನಂತರ ಒಂದು ಸಕಾರಾತ್ಮಕ ಆದೇಶ ಕೊಡಲಾಗಿದೆ. ಎಲ್ಲಾ ರೀತಿಯ ಒಳಿತುಗಳಲ್ಲಿ ಪ್ರವಾದಿವರ್ಯರನ್ನು(ಸ) ಅನುಸರಿಸಬೇಕೆಂಬುದೇ ಈ ಆದೇಶ. ಕೆಡುಕುಗಳಿಗೆ ಸಂಬಂಧಿಸಿದಂತೆ ಅಜ್ಞಾನ ಕಾಲದ ಸ್ತ್ರೀಯರು ನಿರತರಾಗಿದ್ದ ದೊಡ್ಡ ದೊಡ್ಡ ಕೆಡುಕುಗಳನ್ನು ಪ್ರಸ್ತಾಪಿಸಿ ಅದರಿಂದ ದೂರವಿರುವ ಕರಾರು ಪಡೆಯಲಾಗಿದೆ. ಆದರೆ ಒಳಿತುಗಳಿಗೆ ಸಂಬಂಧಿಸಿದಂತೆ ಅದರ ಯಾವುದೇ ಪಟ್ಟಿಯನ್ನು ಮುಂದಿಟ್ಟು

اللهَ ۚ إِنَّ اللهَ غَفُورٌ رَّحِيمٌ ⑫

ಖಂಡಿತವಾಗಿಯೂ ಅಲ್ಲಾಹನು ಕ್ಷಮಾಶೀಲನೂ ಕರುಣಾ ನಿಧಿಯೂ ಆಗಿರುತ್ತಾನೆ.

يَا أَيُّهَا الَّذِينَ آمَنُوا لَا تَتَوَلَّوْا قَوْمًا غَضِبَ اللهُ عَلَيْهِمْ قَدْ يَئِسُوا مِنَ الْآخِرَةِ كَمَا يَئِسَ الْكُفَّارُ مِنْ أَصْحَابِ الْقُبُورِ ⑬

13. ಸತ್ಯವಿಶ್ವಾಸಿಗಳೇ, ಅಲ್ಲಾಹನ ಕ್ರೋಧಕ್ಕೊಳಗಾದವರನ್ನು ಮಿತ್ರರಾಗಿ ಮಾಡಿಕೊಳ್ಳಬೇಡಿರಿ. ಸಮಾಧಿಗಳೊಳಗೆ ಬಿದ್ದಿರುವ ಸತ್ಯ ನಿಷೇಧಿಗಳು ಪರಲೋಕದ ಬಗ್ಗೆ ನಿರಾಶರಾಗಿ ಬಿಟ್ಟಂತೆಯೇ ಇವರು ನಿರಾಶರಾಗಿ ಬಿಟ್ಟಿರುತ್ತಾರೆ.

ಇಂತಿಂತಹ ಕೆಲಸಗಳನ್ನು ಮಾಡಬೇಕೆಂಬ ಕರಾರು ಪಡೆಯಲಾಗಿಲ್ಲ. ಬದಲಾಗಿ ಪ್ರವಾದಿವರ್ಯರು(ಸ) ಯಾವುದೇ ಸತ್ಕಾರ್ಯದ ಬಗ್ಗೆ ಆದೇಶಿಸಿದರೂ ಅದನ್ನು ಅನುಸರಿಸಬೇಕು ಎಂದು ಹೇಳಲಾಗಿದೆ.